ಶ್ರೀ ಆರ್.ವಿ. ದೇಶಪಾಂಡೆ : ವಿರೋಧಪಕ್ಷದವರು ಬೇರೆ ಬೇರೆ ವಿಷಯಗಳನ್ನು ತಂದು ಇಲ್ಲಿ ಚರ್ಚೆ ಮಾಡಿದ್ದಾರೆ. ಅದಕ್ಕೆ ನಾವೇನು ಮಾಡುವುದಕ್ಕೆ ಆಗುತ್ತದೆ. ಈಗ ನಾವು ಉದ್ದೇಶ ಪೂರ್ವಕವಾಗಿ ಚರ್ಚೆಮಾಡುವುದು ಬೇಡ ಎಂದು ಓಡಿ ಹೋಗಿದ್ದೇವೆಯೇ? ಈ ವಿಷಯ ಏನು ಇದೆಯಲ್ಲ ಈ ವಿಷಯದ ಬಗ್ಗೆ ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಇದು ಕೇವಲ ಕರ್ನಾಟಕ ವಿಧಾನ ಸಭೆಗೆ ಸೀಮಿತವಾಗಿಲ್ಲ. ಈ ರೀತಿಯ ವಾತಾವರಣ ಈ ದೇಶದಲ್ಲಿಯೇ ಇದೆ. ತಾವು ನಿರ್ಣಯಮಾಡಿ ಅದಕ್ಕೆ ಇಂತಹ ವಿಷಯಗಳನ್ನು ಬಿ.ಎ.ಸಿ.ಯಲ್ಲಿ ತೀರ್ಮಾನವಾಗಬೇಕು. ಅಲ್ಲಿ ತೀರ್ಮಾನ ಮಾಡಿದಂತೆ ಸಭೆ ನಡೆಯುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ನಾನು ತಮಗೆ ಮನವಿ ಮಾಡುತ್ತೇನೆ. ಇತಿಹಾಸದಲ್ಲಿ 18 ಗಂಟೆಗಳಲ್ಲಿ ಡಿಮಾಂಡ್ಸ್ ಮೇಲೆ ಚರ್ಚೆ ಮಾಡಿ ಪಾಸ್ ಮಾಡಿದ್ದನ್ನು ತಾವು ತೋರಿಸಿದರೆ ಅಫ್ ಟು 11ನೇ ಅಸೆಂಬ್ಲಿಯವರೆಗೂ ನೀವು ಹೇಳಿದಂತೆ ನಾನು ಕೇಳುತ್ತೇನಮ

ಅಧ್ಯಕ್ಷರು : ಈಗ ಅದು ಬೇಡ. ಅದರ ಬಗ್ಗೆ ಬೇರೆ ಚರ್ಚೆ ಮಾಡೋಣ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ನಿಮಗೆ ಮನವಿ ಮಾಡುತ್ತಿದ್ದೇನೆ. ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, in a way he is cashing aspersions on the Speakers.

ಅಧ್ಯಕ್ಷರು : ಬಿ.ಎ.ಸಿ.ಯಲ್ಲಿ ಏನು ತೀರ್ಮಾನವಾಗುತ್ತದೆಯೋ ಆ ರೀತಿ ಸಭೆ ನಡೆಯುತ್ತಿದೆ. ಇದು ಬಿ.ಎ.ಸಿ.ಯಲ್ಲಿ ಮಾತನಾಡಲು ವಿಷಯ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ನಾನು ಈ ವಿಷಯವನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಮಾನ್ಯ ಸೋಮಶೇಖರ್‌ರವರೇ ಇದು ತಮಗೂ ಅನ್ವಯಿಸುತ್ತದೆ.

ಅಧ್ಯಕ್ಷರು : ಈಗ ಮೊದಲು ಜನತಾದಳ ಸದಸ್ಯರ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ. ಅವರು ಮೊದಲೇ ಹೇಳಿದಹಾಗೆ ಮಾನ್ಯ ದಿವಂಗತ ಭೈರೇಗೌಡರ ಶ್ರದ್ಧಾಂಜಲಿ ಸಭೆ ಇದೆ. ಅದಕ್ಕೆ ಮಾನ್ಯ ಸೋಮಶೇಖರ್‌ರವರ ಪ್ರಶ್ನೆ ತೆಗೆದುಕೊಳ್ಳೋಣ.

6. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರಾಜ್ಯದಲ್ಲಿರುವ ಗಣಿ ಕೈಗಾರಿಕೆಗಳು

623 (5173) : ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) ಮಾನ್ಯ ಗಣಿ ಮತ್ತೂ ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು; ಅನಧಿಕೃತವಾಗಿ ಗಣಿ ಕೈಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾದ ನಿರ್ಬಂಧವಿರುವ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; ಅವುಗಳಲ್ಲಿ ಇನ್ನೂ ಗಣಿ ಕೈಗಾರಿಕೆ ಮುಂದುವರೆದಿರುವುದು ನಿಜವಲ್ಲವೆ;

ಈ) ಗಣಿ ಕೈಗಾರಿಕೆಗಳಿಂದ ಉಂಟಾದ ಅಪಘಾತಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಸಾವು-ನೋವುಗಳ ವಿವರಗಳನ್ನು ನೀಡುವುದು;

ಉ) ಈ ಅಪಘಾತಗಳನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಊ) ಗಣಿ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರವು ನಿಯಮಾವಳಿಗಳನ್ನೇನಾದರೂ ರೂಪಿಸಿದೆಯೆ? ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 7188 ಗಣಿ ಕೈಗಾರಿಕೆಗಳಿದ್ದು, ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ ಮತ್ತು ಅನಧಿಕೃತ ಗಣಿಗಾರಿಕೆಯ ಅಂಶ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಪ್ರದೇಶವನ್ನು ತಪಾಸಣೆ ನಡೆಸಿ ಕಲ್ಲು ಗಣಿ ಗುತ್ತಿಗೆಗಳನ್ನು ನಿಯಮಾವಳಿ ಪ್ರಕಾರ ಮಂಜೂರು ಮಾಡಿ ಸಕ್ರಮಗೊಳಿಸಲಾಗುತ್ತದೆ. ಅಲ್ಲದೆ, ಅಕ್ರಮವಾಗಿ ಅನಧಿಕೃತ ಗಣಿಗಾರಿಕೆಯಲ್ಲಿ ತೊಡಗಿದ ವ್ಯಕ್ತಿಗಳಿಂದ 2002-03ರಲ್ಲಿ ರೂ. 40,12,521-00 ದಂಡ ಸಂಗ್ರಹಿಸಲಾಗಿದೆ ಮತ್ತು 21 ಪ್ರಕರಣಗಳಲ್ಲಿ ಸಂಬಂಧಪಟ್ಟ ಪೋಲೀಸ್ ಠಾಣೆಗಳಲ್ಲಿ ಕೇಸುಗಳನ್ನು ದಾಖಲಿಸಲಾಗಿರುತ್ತದೆ. ದಂಡ ಸಂಗ್ರಹಿಸಿ ಗಣಿ ಕಾರ್ಯ ನಿಲ್ಲಿಸಿರುವುದರಿಂದ ಯಾವುದೇ ನಷ್ಟವಾಗಿಲ್ಲ.

ಇ) ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾದ ನಿರ್ಬಂಧವಿರುವ 18 ಪ್ರದೇಶಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಿದ ಮತ್ತು ಯಾವ ಪ್ರದೇಶದಲ್ಲಿಯೂ ಗಣಿ ಕೈಗಾರಿಕೆ ನಡೆಯುತ್ತಿರುವುದಿಲ್ಲ.

ಈ) ಈ ಮಾಹಿತಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಮುಖ್ಯ ಖನಿಜ ಗಣಿ ಕೈಗಾರಿಕೆಗಳನ್ನು ಸ್ಥಾಪಿಸಲು ಎಂ.ಎಂ.ಡಿ.ಆರ್.ಆಕ್ಟ್ 1957 ಮತ್ತು ಎಂ.ಸಿ.ಆರ್. 1960ರ ನಿಯಮ ಹಾಗೂ ಕಲ್ಲು ಗಣಿ ಕೈಗಾರಿಕೆಗಳನ್ನು ಸ್ಥಾಪಿಸಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ, 1994ನ್ನು ರೂಪಿಸಿದೆ.

ಅನುಬಂಧ-1

ರಾಜ್ಯದಲ್ಲಿ ಗಣಿ/ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಗುತ್ತಿಗೆದಾರರ ವಿವರ

ಕ್ರ.ಸಂ.	ಜಿಲ್ಲೆ	ಗಣಿ ಗುತ್ತಿಗೆದಾರರ ಸಂಖ್ಯೆ	ಕಲ್ಲು ಗಣಿ ಗುತ್ತಿಗೆದಾರರ ಸಂಖ್ಯೆ
1.	ಬೆಂಗಳೂರು ಉತ್ತರ	7	853
2.	ಬೆಂಗಳೂರು ದಕ್ಷಿಣ	–	394
3.	ಚಾಮರಾಜನಗರ	–	113
4.	ಚಿಕ್ಕಮಗಳೂರು	4	175
5.	ದಕ್ಷಿಣ ಕನ್ನಡ	23	941
6.	ಹಾಸನ	14	223
7.	ಕನಕಪುರ	2	265

ಕ್ರ.ಸಂ.	ಜಿಲ್ಲೆ	ಗಣಿ ಗುತ್ತಿಗೆದಾರರ ಸಂಖ್ಯೆ	ಕಲ್ಲು ಗಣಿ ಗುತ್ತಿಗೆದಾರರ ಸಂಖ್ಯೆ
8.	ಕೋಲಾರ	7	331
9.	ಮಂಡ್ಯ	4	328
10.	ಮೈಸೂರು	26	444
11.	ಶಿವಮೊಗ್ಗ	7	292
12.	ತುಮಕೂರು	50	231
13.	ಬೆಳಗಾಂ	39	148
14.	ಬಳ್ಳಾರಿ	9	411
15.	ಬಿಜಾಪುರ	–	138
16.	ಚಿತ್ರದುರ್ಗ	61	117
17.	ಧಾರವಾಡ	25	277
18.	ಗುಲ್ಬರ್ಗಾ	12	207
19.	ಹೊಸಪೇಟೆ	103	157
20.	ಇಳಕಲ್	54	96
21.	ಕೊಪ್ಪಳ	11	162
22.	ಸೇಡಂ	10	257
23.	ಉತ್ತರ ಕನ್ನಡ	36	124
	ಒಟ್ಟು	**504**	**6684**

Annexure -2

Sl.	Government	Date	Area	K.M
1.	CI/150/MMN/90	9/10-01-1991	Bennerghatta National Park	1 K.M
2.	CI/418/MRC.92	02.07.1994	S.No. 26 Maranaikahahalli Devanahalli Taluk (Srirama temple)	2 K.M
3.	CI/418/MRC/92	02.07.1994	Shivaganagahills Nelamangala Taluk (Gangadhareswar Temple)	2 K.M
4.	CI/418/MRC/92	02.07.1994	Shravanabelagola C.R. Patna Taluk Hassan (Gumateswara)	5 K.M

Sl. Government	Date	Area	K.M
5. CI/418/MRC/92	02.06.1994	Bannerghatta National Park	1 K.M
6. CI/14/MMN/96	24.05.1996	Shravanabelagola, Hassan	2 to 5 K.M
7. CI/312/MMN/97 (P)	27.05.1997	Karkala,, Udupi Taluk & Dist.	S.Ni. 101 etc.,
8. CI/312/MMN/97 (P)	26.07.1997	Karkala, Udupi Taluk & Dist.	S.No. 93
9. CI/151/MMN/99	16.03.1999	Karkala Bahubali Udupi District	2 K.M
10.CI/MMN/99	11.01.1999	Talakadu, T. Narasipur Mysore (Keerthenarayana Temple)	3 K.M.
11.CI/1/MMN/2000	25.11.2000	Shimsha River, Maddur Mandya District Keerthenarayana Temple)	
12.CI/116/MMN/2000	13.11.2000	Arkavathi River, Kanakapur	
13.CI/183/MMN/2000	25.11.2000	Maleyur etc., C.R. Nagar Taluk	
14.CI/59/MMN/2001	09.03.2001	Kanva River Channapatna	
15.CI/415/MMN/02	18.03.2003	Madikeri Taluk, Hadawadagrama, Pallur	
16.CI/164/MMN/98(P)	07.06.2003	Kollegal Taluk, C.R. Nagar, Forest areas.	
17.CI 65 MMN 96	07.12.96	Jambunatha Temple, Near Hospet Town, Bellary District	Beyond 200 Mtr.
18.CI/214/MMN 2002	18.11.2002	Hampi, Ancient and Historical monuments	

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕಂಥ ಪ್ರಶ್ನೆಯಲ್ಲಿ 5–6 ವಿಷಯಗಳನ್ನು ಒಳಗೊಂಡಿದೆ. ಆದರೆ ಇವರು ಕೊಟ್ಟಿರತಕ್ಕಂಥ ಉತ್ತರ ಕೇವಲ ಎರಡು ಪ್ರಶ್ನೆಗಳಿಗೆ ಮಾತ್ರ. ಒಂದು ರಾಜ್ಯದಲ್ಲಿರುವ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು? ಅನಧಿಕೃತವಾಗಿ

ಗಣಿ ಕೈಗಾರಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದಕ್ಕೆ ಉತ್ತರ ಕೊಟ್ಟಿದ್ದಾರೆ 7188 ಫೈರಿಂಗ್ ಇಂಜುರೀಸ್ ಆಗಿದೆ ಅದು ಯಾವ ಯಾವುದು ಅಂತ. ಇಲ್ಲಿಗಲ್ ಅಕ್ಟಿವಿಟೀಸ್ ಯಾರು ಮಾಡುತ್ತಿದ್ದಾರೆಂದು. ಗೊತ್ತಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಅದೂ ಹೇಳಿದ್ದೀರಿ. ಮತ್ತೆ ಇನ್ನೊಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾದ ನಿರ್ಬಂಧವಿರುವ ಗಣಿ ಕೈಗಾರಿಕೆ ಸಂಖ್ಯೆ ಎಷ್ಟು? ಅವುಗಳು ಯಾವುವು? ಅವುಗಳಲ್ಲಿ ಇನ್ನೂ ಗಣಿ ಕೈಗಾರಿಕೆ ಮುಂದುವರಿದಿವೆಯೇ ಎನ್ನುವುದಕ್ಕೆ ತಾವು ಉತ್ತರ ಕೊಟ್ಟಿಲ್ಲ. ಗಣಿ ಕೈಗಾರಿಕೆಗಳಿಂದ ಉಂಟಾದ ಅಪಘಾತಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ಸಾವು ನೋವುಗಳ ವಿವರಗಳನ್ನು ನೀಡುವುದು, ಅದಕ್ಕೂ ಉತ್ತರ ಕೊಟ್ಟಿಲ್ಲ ಈ ಅಪಘಾತಗಳನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು? ಅದಕ್ಕೂ ಉತ್ತರ ಕೊಟ್ಟಿಲ್ಲ. ಗಣಿ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ನಿಯಮಾವಳಿಗಳನ್ನು ಏನಾದರೂ ರೂಪಿಸಿದೆಯೇ ಆಗಿದ್ದಲ್ಲಿ ವಿವರಗಳನ್ನು ನೀಡುವುದು. ಅದಕ್ಕೂ ಉತ್ತರ ಕೊಟ್ಟಿಲ್ಲ ತಾವು ಕೊಟ್ಟಿರತಕ್ಕಂಥ ಉತ್ತರ ಏನೂ ಅರ್ಥವಾಗಿಲ್ಲ. ಮತ್ತೆ ಈಗ ಕ್ರಶರ್ಸ್ ಅಂತ ಏನು ಹೇಳುತ್ತಿದ್ದೇವೆ ಸುಮಾರು 15 ಸಾವಿರಕ್ಕೂ ಹೆಚ್ಚು ಕ್ರಶರ್ಸ್ ಇವತ್ತು ಬೆಂಗಳೂರು ಸುತ್ತಮುತ್ತಲು ಬರುತ್ತಿವೆ. ಅದಕ್ಕೆ ಯಾವ ಲೈಸೆನ್ಸ್ ಇಲ್ಲ. ಪರಿಸರ ಇಲಾಖೆಯವರನ್ನು ಕೇಳಿದರೆ ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ನಿಮ್ಮ ಇಲಾಖೆಯನ್ನು ಕೇಳಿದರೆ ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ಅನಧಿಕೃತವಾಗಿ ಇವತ್ತು ಅದೆಷ್ಟು ಲೂಟಿಯಾಗುತ್ತಿದೆಯೋ ಗೊತ್ತಿಲ್ಲ. ಅದಕ್ಕೆ ಯಾವ ನಿಯಂತ್ರಣ ಇಲ್ಲ. ಆದ್ದರಿಂದ ಅದಕ್ಕೆ ಏನಾದರೂ ನಿಯಂತ್ರಣ ಹಾಕಿದ್ದೀರಾ? ಲೈಸೆನ್ಸ್ ಕೊಟ್ಟು ಮಾಡತಕ್ಕಂಥಾದ್ದು, ಎಷ್ಟು ಹೋಗಿದೆ? ಎಷ್ಟು ನಾವು ನೋವುಗಳು ಆಗಿದೆ? ಇದರ ಬಗ್ಗೆ ನಾನು ಕೇಳಿರತಕ್ಕಂಥಾದ್ದು, ಅದಕ್ಕೆ ತಾವು ಉತ್ತರ ಕೊಟ್ಟಿಲ್ಲ.

ಶ್ರೀ ವಿ. ಮುನಿಯಪ್ಪ (ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಕೇಳಿದ ರೀತಿಯಲ್ಲಿ ನಮ್ಮಲ್ಲಿ ಅಕ್ರಮ ಗಣಿಗಾರಿಕೆ ಏನು ನಡೆಯುತ್ತಿದೆಯೋ ಅದನ್ನು ಯಾವ ರೀತಿ ತಡೆಗಟ್ಟುತ್ತಿದ್ದೇವೆ ಎನ್ನುವ ವಿಚಾರಕ್ಕೆ ನಾನು ಬಹಳ ಕ್ಲಿಯರ್ ಆಗಿ ಹೇಳಿದ್ದೇನೆ. ಅಕ್ರಮ ಗಣಿಗಾರಿಕೆಯನ್ನು ನಾವು ತಡೆಯುತ್ತಿದ್ದೇವೆ ನಮ್ಮ ಇಲಾಖೆಗೆ ನಮ್ಮ ಸ್ಕ್ವಾಡ್‌ಗೆ ದೂರು ಬಂದ ತಕ್ಷಣ ಅದನ್ನು ತಡೆದು ಫೆನಾಲ್ಟಿ ಹಾಕತಕ್ಕಂಥಾದ್ದು ಆ ಫೆನಾಲ್ಟಿಯಿಂದ ಸುಮಾರು 40 ಲಕ್ಷಕ್ಕೂ ಮೇಲ್ಪಟ್ಟು ಫೆನಾಲ್ಟಿಯನ್ನು ನಾವು ಕಲೆಕ್ಟ್ ಮಾಡಿರತಕ್ಕಂಥ ವಿವರಣೆಯನ್ನು ನಾನು ಕೊಟ್ಟಿದ್ದೇನೆ. ಅದರ ಜೊತೆಯಲ್ಲಿ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿರುವ ನಿರ್ಬಂಧಿತ ಗಣಿಗಾರಿಕೆಗಳು ಎಷ್ಟು ಎಂದು ಕೇಳಿದ್ದೀರಿ ನಾವು ಅಧಿಕೃತವಾಗಿ ನಿರ್ಬಂಧ ಮಾಡಿರತಕ್ಕಂಥ 18 ಪ್ರದೇಶಗಳೆಂದು ನಾವು ವಿವರ ಕೊಟ್ಟಿದ್ದೇನೆ. ನಿರ್ಬಂಧ ಯಾವುವು ಎಂದು ನಾನು ಅನುಬಂಧದಲ್ಲಿ ಕೊಟ್ಟಿದ್ದೇನೆ. ಅನುಬಂಧ–1ರಲ್ಲಿ ಇದೆ.

ಶ್ರೀ ಬಿ. ಸೋಮಶೇಖರ್ : ಜಿಲ್ಲಾವಾರು ವಿವರ ಕೊಟ್ಟಿದ್ದೀರಿ. ಈ ಕಡೆ ಏರಿಯಾ ಕೊಟ್ಟಿದ್ದೀರಿ ಮತ್ತು ಇನ್ನೊಂದು ಇದಕ್ಕೆ ಯಾವ ನಿಯಮಾವಳಿಗಳ ಮೂಲಕ ಲೈಸೆನ್ಸ್ ಕೊಡುತ್ತಿದ್ದೀರಿ. ಇಲ್ಲದಿದ್ದರೆ ಎಷ್ಟು ಇಲ್ಲಿಗಲ್ ಆಗಿ ನಡೆಸುತ್ತಿದ್ದಾರೆ. ಎಷ್ಟು ಕಡೆ ಬ್ಲಾಸ್ಟ್ ಆಗಿ ಸಾವು ನೋವುಗಳು ಆಗಿದೆ. ಅದರ ಬಗ್ಗೆ ತಮ್ಮ ಹತ್ತಿರ ಅಂಕಿಅಂಶಗಳು ಇಲ್ಲ. ಮತ್ತು ಅವರು ಯಾವ ಒಂದು ನಿಯಮಾವಳಿಗಳ ಮೇಲೆನಡೆದುಕೊಂಡಿದ್ದಾರೆ. ಎಷ್ಟು ಲೂಟಿಯಾಗಿದೆ ಆ ಕ್ರಷರ್ಸ್ ಅಂದರೆ ಪುಡಿ

ಮಾಡುತ್ತಾ ಇರತಕ್ಕಂಥಾದ್ದು. ಜಲ್ಲಿ ಮಾಡತಕ್ಕಂಥ ಆ ಜಲ್ಲಿಯನ್ನು ರಸ್ತೆಗಳ ನಿರ್ಮಾಣಕ್ಕೆ ಉಪಯೋಗಿಸುತ್ತಿದ್ದಾರೆ. ಸಿಮೆಂಟ್‌ಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದರ ಲೆಕ್ಕ ಇಲ್ಲ. ಬ್ಲಾಸ್ಟ್ ಆಗುತ್ತದೆ ಎಷ್ಟೋ ಜನರ ಸಾವುಗಳು ಆಗಿವೆ. 10–15 ಸಾವಿರಕ್ಕೂ ಹೆಚ್ಚು ಇಂತಹ ಕ್ರಷರ್ಸ್ ಇವೆ. ಇದು ನನ್ನ ಮೂಲಭೂತವಾದ ಪ್ರಶ್ನೆ. ಬೆಂಗಳೂರಿನ ಸುತ್ತಮುತ್ತ, ಕನಕಪುರದಲ್ಲಿವೆ. ಎಲ್ಲಾ ಕಡೆ ಇವೆ. ಅದರ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಗಣಿ ಇಲಾಖೆಗೆ ಸಂಬಂಧಪಟ್ಟ ಹಾಗೆ ನಾವು ಗಣಿಗಾರಿಕೆಗೆ ಮಾತ್ರ ಅನುಮತಿ ಕೊಡುತ್ತೇವೆ. ತದನಂತರ ಅವರು ಎಕ್ಸ್‌ಪೋಸಿಟ್ಸ್ ಬಗ್ಗೆ ಪೊಲೀಸ್ ಇಲಾಖೆಯಿಂದ ಮತ್ತು ಜಿಲ್ಲಾ ಮ್ಯಾಜಿಸ್ಟೇಟ್, ಜಿಲ್ಲಾಧಿಕಾರಿಗಳಿಂದ ಅವರು ಅನುಮತಿ ಪಡೆದುಕೊಳ್ಳಬೇಕಾಗುತ್ತದೆ. ಮತ್ತು ಕಾರ್ಮಿಕ ಇಲಾಖೆಯಿಂದ ಅವರು ಅನುಮತಿ ಪಡೆದುಕೊಳ್ಳಬೇಕಾಗುತ್ತದೆ. ಅಲ್ಲಿ ಆಕಸ್ಮಿಕವಾಗಿ ಆಗತಕ್ಕಂಥ ದುರಂತಗಳ ಬಗ್ಗೆ ಕಾರ್ಮಿಕ ಕಲ್ಯಾಣ ಇಲಾಖೆಯವರು ಉಸ್ತುವಾರಿ ನೋಡಬೇಕಾಗುತ್ತದೆ. ಮತ್ತು ಅಲ್ಲಿ ಆಗುವಂತಹ ದುರ್ಘಟನೆಗಳ ಬಗ್ಗೆ ಪೊಲೀಸ್ ಇಲಾಖೆಗೆ ದೂರುಗಳು ಹೋದರೆ ಅವರು ಅದರ ಬಗ್ಗೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯಾಪ್ತಿ ಅವರಿಗೆ ಬರುತ್ತದೆ. ನಮ್ಮ ಗಣಿಗಾರಿಕೆಗೆ ಸಂಬಂಧಪಟ್ಟಂತೆ ನಮಗೆ ಯಾವುದೇ ತರಹದ ದೂರುಗಳು ಬರುವುದಿಲ್ಲ. ಏನಾದರೂ ಆಕಸ್ಮಿಕವಾಗಿ ಗಣಿಗಾರಿಕೆಗೆ ಕೊಟ್ಟು ತಮನಂತರ ಆಗುವಂತಹ ಘಟನೆಗಳು ಏನಿದ್ದರೂ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿರತಕ್ಕಂಥಾದ್ದು.

ಶ್ರೀ ಬಿ. ಸೋಮಶೇಖರ್ : ಬಂಡೆಗಳು ಇರುತ್ತವೆಯಲ್ಲಾ ಅವು ನಿಮ್ಮ ಗಣಿ ಇಲಾಖೆಗೆ ಬರುವುದಿಲ್ಲವೇ?

ಶ್ರೀ ವಿ. ಮುನಿಯಪ್ಪ : ಅದು ಬರುತ್ತದೆ.

ಶ್ರೀ ಬಿ. ಸೋಮಶೇಖರ್ : ಆ ಬಂಡೆಗಳಿಂದ ಲೂಟಿ ಹೊಡೆಯುತ್ತಿದ್ದರೆ ಅದು ನಿಮಗೆ ಸಂಬಂಧ ಬರುವುದಿಲ್ಲವೇ?

ಶ್ರೀ ವಿ. ಮುನಿಯಪ್ಪ : ಇಲ್ಲಿಗಲ್ ಆಗಿ ಗಣಿಗಾರಿಕೆ ಮಾಡುವ ಕಡೆ ನಮ್ಮ ಗಮನಕ್ಕೆ ತತಕ್ಷಣ ಬಂದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸೋಮಶೇಖರ್ : ನನಗೆ ತಿಳಿದ ಪ್ರಕಾರ ಸುಮಾರು 10–15 ಸಾವಿರ ಕ್ರಷರ್ಸ್ ಇವೆ. ಅವು ಒಂದೊಂದು ನಿಮಿಷಕ್ಕೆ ಎಷ್ಟೋ ಟನ್ಸ್ ಬ್ಲಾಸ್ಟ್ ಮಾಡುತ್ತಾರೆ. ಜಲ್ಲಿ ಆಗುತ್ತಿದೆ. ಪುಡಿ ಆಗುತ್ತಿದೆ.

ಶ್ರೀ ವಿ. ಮುನಿಯಪ್ಪ : ಕ್ರಷರ್ಸ್ ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಕ್ರಶರ್‌ಗೆ ಉಪಯೋಗ ಮಾಡತಕ್ಕಂಥ ಕಲ್ಲು ಏನಿದೆ ಅದು ನಮ್ಮ ಇಲಾಖಾ ವ್ಯಾಪ್ತಿಗೆ ಬರುತ್ತದೆ. ನಾವು ಎಲ್ಲೆಲ್ಲಿ ಅಧಿಕೃತವಾಗಿ ಅವರಿಗೆ ಲೀಸ್ ಕೊಟ್ಟಿರುತ್ತೇವೆ ಅವರಿಂದ ಅವರ ಮೆಟೀರಿಯಲ್ಸ್ ತೆಗೆದುಕೊಂಡು ಬರುತ್ತಾರೆ ಅವರು ಕಲ್ಲು ಹೊಡೆದು ಅವರಿಗೆ ಸಪ್ಲೈ ಮಾಡುತ್ತಾರೆ. ಅದು ಸಣ್ಣ ಕೈಗಾರಿಕೆಗಳ ಇಲಾಖಾ ವ್ಯಾಪ್ತಿಗೆ ಬರುತ್ತದೆ. ನಮ್ಮ ಇಲಾಖೆಯ ವ್ಯಾಪ್ತಿಗೆ ಯಾವುದೇ ಕಾರಣಕ್ಕೂ ಬರುವುದಿಲ್ಲ ನಾವು ಅನುಮತಿ ಸಹ ಕೊಡುವುದಿಲ್ಲ. ನಾವು ಗಣಿಗಾರಿಕೆಗೆ ಮಾತ್ರ ಅನುಮತಿ ಕೊಡುತ್ತೇವೆ. ನಾವು ಎಲ್ಲಿ ಅಧಿಕೃತವಾಗಿ ಲೈಸೆನ್ಸ್ ಕೊಟ್ಟಿರುತ್ತೇವೆ ಅಲ್ಲಿ ಅವರಿಗೆ ಬೇಕಾಗಿರುವಂತಹ ರಾ

ಮೇಟರಿಯಲ್ಸ್ ತೆಗೆದುಕೊಂಡು ಬರುತ್ತಾರೆ ಕ್ರಷರ್ ಮಾಡಿಕೊಳ್ಳುತ್ತಾರೆ. ಅದಕ್ಕೂ ನಮಗೂ ಸಂಬಂಧ ಇಲ್ಲ.

5.10 ಪಿಎಂ

ಅಕ್ರಮವಾಗಿ ಅಲ್ಲೀನಾದರೂ ಗಣಿಗಾರಿಕೆಯನ್ನು ಮಾಡುತ್ತಿದ್ದರೆ ಅದರ ಬಗ್ಗೆ ನಾವು ತನಿಖೆಯನ್ನು ಮಾಡುತ್ತೇವೆ. ಅದರ ಬಗ್ಗೆ ನಮ್ಮ ಗಮನಕ್ಕೆ ಬಂದರೆ ಅವರಿಗೆ ಫೆನಾಲ್ಟಿಯನ್ನು ಹಾಕುತ್ತೇವೆ ಮತ್ತು ಕೆಲವು ಕಡೆ ರೆಗ್ಯುಲರೈಸ್ ಮಾಡುವುದಕ್ಕೆ ನಿಯಮಾವಳಿಯಲ್ಲಿ ನಮಗೆ ಅವಕಾಶವಿದೆ. ಆ ಪ್ರಕಾರ ಕೆಲವು ಕಡೆ ರೆಗ್ಯುಲರೈಸ್ ಮಾಡುತ್ತೇವೆ. ಸಣ್ಣ ಸಣ್ಣ ನಮ್ಮ ಬೋವಿ ಸಂಘದವರು ಒಡೆದುಕೊಳ್ಳುತ್ತಿರುತ್ತಾರೆ. ಅವರು ಅನಧಿಕೃತವಾಗಿ ಒಡೆಯುತ್ತಿರುತ್ತಾರೆ. ಅಂಥದ್ದರ ಬಗ್ಗೆ ನಮ್ಮ ಗಮನಕ್ಕೆ ಬಂದರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಅದನ್ನು ಮಾಡಿಕೊಡತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ. ಇನ್ನು ಮತ್ತೆ ಬೇರೆ ಬೇರೆ ಕಡೆ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವ ಬಗ್ಗೆ ನಮಗೆ ದೂರೇನಾದರೂ ಬಂದರೆ ತಕ್ಷಣ ಅದನ್ನು ತಡೆಗಟ್ಟತಕ್ಕಂಥದ್ದರ ಬಗ್ಗೆ ಅಥವಾ ಫೆನಾಲ್ಟಿ ಹಾಕತಕ್ಕಂಥದ್ದರ ಬಗ್ಗೆಯಾಗಲಿ, ಒಟ್ಟಾರೆ ಕಾನೂನಿನ ರೀತಿಯಲ್ಲಿ ಏನು ಕ್ರಮವನ್ನು ಕೈಗೊಳ್ಳಬೇಕೋ ಆ ಪ್ರಕಾರ ಕಡ್ಡಾಯವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಸಚಿವರೇ, ಗಣಿಗಾರಿಕೆಗೆ ನೀವು ಲೈಸೆನ್ಸ್ ಕೊಟ್ಟಾದ ನಂತರ ಡೆಪ್ತ್ ಬಗ್ಗೆ ಏನಾದರೂ ನಿರ್ಬಂಧವನ್ನು ಹಾಕಿರುತ್ತೀರಾ ಎನ್ನುವ ಬಗ್ಗೆ ಸ್ಪಷ್ಟಪಡಿಸಬೇಕು. ಇದಲ್ಲದೇ ಗಣಿಗಾರಿಕೆಯಿಂದ ಭೂಮಿಯ ಮೇಲೆ ದುಷ್ಪರಿಣಾಮ ಯಾವ ರೀತಿಯಲ್ಲಿ ಆಗುತ್ತದೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್‌ರವರು ಅಕ್ರಮ ಗಣಿಗಾರಿಕೆ ಬಗ್ಗೆ ಪ್ರಶ್ನೆಯನ್ನು ಕೇಳಿ ಎಷ್ಟು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಕೇಳಿದ್ದಾರೆ. ಮೊನ್ನೆ ಪತ್ರಿಕೆಯಲ್ಲಿ ತಾವೂ ಕೂಡ ಓದಿರಬಹುದು. ಚಾಮರಾಜನಗರ ಮತ್ತು ಕರಡಿಗುಡ್ಡ ಜಾಗಗಳಲ್ಲಿ ಗಣಿಗಾರಿಕೆಗೆ ಕೋರ್ಟ್‌ನಿಂದ ಸ್ಟೇ ಬಂದರೂ ಕೂಡ ಪುನಃ ಅಪರೇಟ್ ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಸಚಿವರು ಉತ್ತರ ಕೊಡಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಈ ಅಕ್ರಮ ಗಣಿಗಾರಿಕೆ ಬಗ್ಗೆ ನಮ್ಮ ಇಲಾಖೆಗೆ ದೂರು ಬಂದರೆ ಅದನ್ನು ತಕ್ಷಣ ಸಾಧ್ಯವಾದಷ್ಟು ಮಟ್ಟಿಗೆ ತಡೆಗಟ್ಟುವ ಕೆಲಸವನ್ನು ನಮ್ಮ ಇಲಾಖೆ ತಕ್ಷಣ ಮಾಡುತ್ತದೆ. ಇದಕ್ಕೆ ಉದಾಹರಣೆಯಾಗಿ ಕಳೆದ ಮೂರು ವರ್ಷಗಳಿಗೆ ಹೋಲಿಕೆಮಾಡಿದಾಗ ನಮ್ಮ ಆದಾಯ ಜಾಸ್ತಿ ಆಗಿರುವುದನ್ನು ನೋಡಿದರೆ ಗೊತ್ತಾಗುತ್ತದೆ. ಅದಕ್ಕನುಗುಣವಾಗಿ ನಾವು ಅಂಕಿ ಅಂಶ ಕೊಡುವುದಾದರೆ ಬಹುಶಃ 108 ಕೋಟಿ ರೂಪಾಯಿಯನ್ನು ಕಳೆದ ಮೂರು ವರ್ಷಗಳ ಹಿಂದೆ ಆದಾಯ ಮೀರಿರಲಿಲ್ಲ. ತದನಂತರ 125 ಕೋಟಿ ರೂಪಾಯಿ ಬಂದಿದೆ. 165 ಕೋಟಿ ರೂಪಾಯಿ ಬಂದಿದೆ. 175 ಕೋಟಿ ರೂಪಾಯಿ ಆದಾಯವನ್ನು ಈ ವರ್ಷ ಮಾಡುತ್ತಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಚಾಮರಾಜನಗರ, ಕರಡಿ ಗುಡ್ಡ ಬಗ್ಗೆ ಗಣಿಗಾರಿಕೆ ಸ್ಟಾಪ್ ಮಾಡುವ ಬಗ್ಗೆ ಹೈಕೋರ್ಟಿನಿಂದ ಆರ್ಡರ್ ನಿಮ್ಮ ಇಲಾಖೆಗೆ ಬಂದಿತ್ತೇ? ಅದಷ್ಟರ ಬಗ್ಗೆ ಹೇಳಿ.

ಶ್ರೀ ವಿ. ಮುನಿಯಪ್ಪ : ಅಲ್ಲಿ ಗಣಿಗಾರಿಕೆಯನ್ನು ಸ್ಟಾಪ್ ಮಾಡಿದ್ದೇವೆ. ಅಲ್ಲಿ ಯಾವುದೇ ಗಣಿಗಾರಿಕೆಗೆ ಅನುಮತಿಯನ್ನು ಕೊಟ್ಟಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅಲ್ಲಿ ನಡೆಯುತ್ತಾ ಇದೆ. ಈಗಲೂ

ಶ್ರೀ ವಿ. ಮುನಿಯಪ್ಪ : ನಡೆಯುತ್ತಾ ಇಲ್ಲ. ನಡೆಯುತ್ತಿದ್ದರೆ ನಾವು ತಕ್ಷಣ ನಿಲ್ಲಿಸುತ್ತೇವೆ. ನಮ್ಮ ಹತ್ತಿರ ಮಾಹಿತಿ ಪ್ರಕಾರ ನಡೆಯುತ್ತಿಲ್ಲ.

ಶ್ರೀ ಬಿ. ಸೋಮಶೇಖರ್ : ಒಂದು ವೇಳೆ ಅಲ್ಲಿ ನಡೆಯುತ್ತಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಿತ್ತೀರ?

ವಿ. ಮುನಿಯಪ್ಪ : ಖಂಡಿತ, ಖಂಡಿತ ಹಂಡ್ರೆಡ್ ಪರ್ಸೆಂಟ್ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಅನುಮತಿ ಇಲ್ಲದೇ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದರೆ.

ಶ್ರೀ ಬಿ. ಸೋಮಶೇಖರ್ : ಮೊನ್ನೆ ಪೇಪರ್‌ನಲ್ಲಿ ಬಂದಿದೆ. ಹೈಕೋರ್ಟ್‌ನಿಂದ ಆರ್ಡರ್ ಬಂದಿದ್ದರೂ ಕೂಡ ಇಲ್ಲಿ ಅಕ್ರಮವಾಗಿ ಗಣಿಗಾರಿಕೆ ನಿರಂತವಾಗಿ ನಡೆಯುತ್ತಲೇ ಇದೆ ಎಮದು ಪತ್ರಿಕೆಯಲ್ಲಿ ಬಂದಿದೆ. ಅದಕ್ಕೆ ತಮ್ಮ ಅಭಿಪ್ರಾಯವೇನು? ಕ್ರಮ ಏನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ವಿ. ಮುನಿಯಪ್ಪ : ಹೈ ಕೋರ್ಟ್ ಆಜ್ಞೆ ಪ್ರಕಾರ ನಿಲ್ಲಿಸಿದ್ದೇವೆ. ಅವರಿಗೆ ಯಾವುದೇ ತರವಾದ ಅನುಮತಿಯನ್ನು ಕೊಟ್ಟಿಲ್ಲ. ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅಲ್ಲಿ ಅಕ್ರಮವಾಗಿ ನಡೆಯುತ್ತಾ ಇತ್ತು ಅಲ್ಲವೆ?

ಅಧ್ಯಕ್ಷರು : ಈಗ ನಡೆಯುತ್ತಾ ಇಲ್ಲ ಎಂದು ಹೇಳುತ್ತಿದ್ದಾರಲ್ಲಾ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಡೆಯುತ್ತಾ ಇದ್ದುದ್ದಕ್ಕೇ ಹೈಕೋರ್ಟ್‌ನಿಂದ ಸ್ಟೇ ತಂದಿದ್ದಾರೆ. ನಾನು ಇನ್ನೇನು ಹೇಳಲಿ ಹೇಳಿ.

ಶ್ರೀ ವಿ. ಮುನಿಯಪ್ಪ : ಪತ್ರಿಕೆಯಲ್ಲಿ ಬಂದಿದ್ದನ್ನು ನಾವು ತನಿಖೆ ಮಾಡಿದ್ದೇವೆ. ಪತ್ರಿಕೆಯಲ್ಲಿ ಬಂದಿದ್ದರಿಂದ ಅದರ ಆಧಾರದ ಮೇಲೆಯೇ ನಮ್ಮ ಅಧಿಕಾರಿಗಳು ಹೋಗಿ ಅಲ್ಲಿ ತನಿಖೆ ಮಾಡಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಪತ್ರಿಕೆಯಲ್ಲಿ ಬಂದಮೇಲೋ ಅಥವಾ ಬರುವುದಕ್ಕಿಂತ ಮೊದಲೋ?

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಹೈಕೋರ್ಟ್ ಆರ್ಡರ್ ಏನಿದೆ ಅದರ ಪ್ರಕಾರ ನಾವು ಕ್ರಮ ತೆಗೆದುಕೊಂಡಿದ್ದೇವೆ. ಈಗ ಕರಡಿಗುಡ್ಡ ಪ್ರದೇಶದಲ್ಲಿ ಗಣಿಗಾರಿಕೆಯನ್ನು ಅರಣ್ಯ ಇಲಾಖೆಯವರು ನಿಷೇಧ ಮಾಡಿದ್ದಾರೆ. ಈಗ ಯಾವುದೇ ಗಣಿಗಾರಿಕೆ ಅಲ್ಲಿ ನಡೆಯುತ್ತಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಹಾಗೆ ಅಲ್ಲಿ ಎಕ್ಸ್‌ಪ್ಲೋಸಿವ್ಸ್ ಇಟ್ಟು ಗಣಿಗಾರಿಕೆ ಮಾಡುವಂಥ ಸಂದರ್ಭದಲ್ಲಿ ಭೂಮಿಯಲ್ಲಿ ಯಾವ ರೀತಿಯ ಪರಿಣಾಮ ಆಗುತ್ತದೆ ಎಂಬ ಬಗ್ಗೆ ಕೇಳಿದ್ದಾರೆ. ಭೂಮಿಯಲ್ಲಾಗತಕ್ಕಂಥ ತೀವ್ರವಾದಂಥ ಪರಿಣಾಮಗಳ ಬಗ್ಗೆ ಹೆಚ್ಚಿಗೆ ನಮ್ಮ ಇಲಾಖೆಯ ಕಡೆಯಿಂದ ಅಧ್ಯಯನ ನಡೆಸಿಲ್ಲ. ಆದರೆ ನಮಗಿರತಕ್ಕಂಥ ಸೈಂಟಿಫಿಕ್ ಬೇಸಿಸ್ ಮೇಲೆ ನಮ್ಮ ಇಲಾಖೆಯವರು ಮಾಡಿರುವುದು ಏನೆಂದರೆ ಒಂದು ಆರು

ಮೀಟರ್ ಅಳತೆಗೆ ಒಂದು ರೀತಿಯಲ್ಲಿ ಬೆಂಚ್ ಸಿಸ್ಟಂ ಮಾಡುತ್ತೇವೆ. ಅದಕ್ಕೂ ಮೇಲೆ ಹೆಚ್ಚು ಹೆಚ್ಚಿಗೆ ಮಾಡಿ ಹೆಚ್ಚಿನ ಒತ್ತಡ ಅಂದರೆ ಪ್ರೆಶರ್ ಬಿಲ್ಡಿಷ್ ಮಾಡಬಾರದು ಎನ್ನತಕ್ಕಂಥ ಒಂದು ನಿಬಂಧನೆ ಇದೆ. ಗಣಿಗಾರಿಕೆ ಮಾಡತಕ್ಕಂಥ ಸಂದರ್ಭದಲ್ಲಿ ಆರು ಮೀಟರ್ ಬೆಂಚಸ್ ಮಾಡಿ ಅಷ್ಟಷ್ಟು ಮಾತ್ರವೇ ಅದನ್ನು ಜ್ಯಾಕ್ ಮಾಡಿ ಈಚೆಗೆ ತೆಗೆಯತಕ್ಕಂಥ ಕೆಲಸ ಮಾಡಬೇಕು ಎಂದು ಹೇಳಿ ಒಂದು ಕಂಡೀಶನ್ ಹಾಕಿದ್ದಾರೆ. ಇದರ ಜೊತೆಗೆ ಪಲೂಶನ್ ಕಂಟ್ರೋಲ್ ಬೋರ್ಡ್‌ನ ಅನುಮತಿಯನ್ನು ಆಗಿಂದ್ದಾಗೆ ಪ್ರತಿ ವರ್ಷವೂ ಪಡೆದುಕೊಳ್ಳಬೇಕು. ಪಲೂಶನ್ ಕಂಟ್ರೋಲ್ ಬೋರ್ಡ್‌ನವರಿಗೆ ದೂರು ಬಂದರೆ ಅಥವಾ ನಮಗೆ ದೂರು ಬಂದರೆ ನಾವು ಆಗಿಂದ್ದಾಗ್ಗೆ ಅಲ್ಲಿಗೆ ಬರತಕ್ಕಂಥ ದೂರುಗಳಿಗನುಸಾರವಾಗಿ ಏನಾದರೂ ವಯಲೀಶನ್ ಇದ್ದರೆ ಅದನ್ನು ತಕ್ಷಣ ರೆಗ್ಯುಲೀಟ್ ಮಾಡತಕ್ಕಂಥ ಕೆಲಸವನ್ನು ನಮ್ಮ ಗಣಿ ಇಲಾಖೆಯವರು ಮಾಡುತ್ತಾರೆ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರ ಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಐದು ಎಕರೆ, ಆರು ಎಕರೆ, ಎರಡು ಎಕರೆ, ಮೂರು ಎಕರೆ, ಸ್ವಂತ ಜಮೀನೊಳಗೆ ಗಣಿಗಾರಿಕೆ ಮಾಡಲಿಕ್ಕೆ ಲೀಸ್ ಕೊಡುತ್ತಿದ್ದೀರಿ, ಆ ಕ್ವಾರಿ ಮಾಡುವಾಗ ಎರಡು ಎಕರೆ, ಮೂರು ಎಕರೆ ಪಕ್ಕದಲ್ಲಿ ರೈತರ ಜಮೀನುಗಳಿರುತ್ತವೆ. ಅಲ್ಲಿ ಕ್ವಾರಿ ಕೆಲಸವನ್ನು ಮಾಡುತ್ತಿರುವಾಗ ಆ ಕ್ವಾರಿ ಒಳಗಿನ ಕಲ್ಲು ಹೋಗಿ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಿರುವ ರೈತನಿಗೆ ಬಡಿದು ಅನಾಹುತವಾಗಿ ಆ ರೈತ ತೀರಿಕೊಂಡರೆ ಅಂಥ ಸಂದರ್ಭದಲ್ಲಿ ಗಣಿ ಇಲಾಖೆಯಿಂದ ಆತನ ಕುಟುಂಬಕ್ಕೆ ಪರಿಹಾರವನ್ನು ಕೊಡುತ್ತಿದ್ದೀರಾ ಅಥವಾ ಇಲ್ಲವೇ ಎನ್ನುವುದು ಒಂದು ಪ್ರಶ್ನೆ. ಇನ್ನು ಮತ್ತೊಂದು ವಿಷಯವೇನೆಂದರೆ, ಇವೊತ್ತು ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ, ಅನೇಕ ತಾಲ್ಲೂಕುಗಳಲ್ಲಿ, ಅನೇಕ ತಾಲ್ಲೂಕುಗಳಲ್ಲಿ ತಾವೇನು ಪರ್ಮಿಟ್ ಕೊಡುತ್ತಿದ್ದೀರೋ ಆ ಪರ್ಮಿಟ್‌ನ್ನು ಅವರು ಏನು ಮಾಡುತ್ತಾರೆಂದರೆ ಐದೋ, ಹತ್ತೋ ಮಾತ್ರ ಆ ಕ್ವಾರಿ ಓನರ್‌ಗೆ ಕೊಡುತ್ತಾರೆ. ಅವರು ಏನು ಮಾಡುತ್ತಾರೆ ಎಂದರೆ ಒಂದು ಪರ್ಮಿಟ್‌ನಲ್ಲಿ ನಾಲ್ಕೋ, ಐದಕ್ಕೋ ಅದೇ ಪರ್ಮಿಟ್‌ಅನ್ನು ತೋರಿಸಿ ತಮ್ಮ ಇಲಾಖೆಗೆ ಸಾಕಷ್ಟು ಹಣ ಬರುವುದನ್ನು ತಡೆಗಟ್ಟುತ್ತಿದ್ದಾರೆ. ತಾವು ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾವು ಗಣಿಗಾರಿಕೆಗೆ ಲೈಸೆನ್ಸ್ ಕೊಡಬೇಕಾದರೆ ಮೊದಲನೆಯದಾಗಿ ಆ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಎನ್.ಓ.ಸಿ. ಯನ್ನು ಪಡೆದುಕೊಳ್ಳುತ್ತೇವೆ. ಸಂಬಂಧಪಟ್ಟ ಫಾರೆಸ್ಟ್ ಇಲಾಖೆಯಿಂದ ಒಂದು ಎನ್.ಓ.ಸಿ. ಯನ್ನು ಪಡೆದುಕೊಳ್ಳುತ್ತೇವೆ. ಅವೆರಡೂ ಎನ್.ಓ.ಸಿ.ಯನ್ನು ಪಡೆದುಕೊಳ್ಳದೇ ನಾವು ಗಣಿಗಾರಿಕೆಗೆ ಲೈಸೆನ್ಸ್ ಕೊಡುವುದಿಲ್ಲ. ಮಾನ್ಯ ಜಿಲ್ಲಾಧಿಕಾರಿಗಳು ಎನ್.ಓ.ಸಿ. ಕೊಡತಕ್ಕಂಥ ಸಂದರ್ಭದಲ್ಲಿ ಅಕ್ಕಪಕ್ಕದಲ್ಲಿರುವ ಖಾಸಗಿ ಜಮೀನುಗಳಿಗೆ ಧಕ್ಕೆಯಾಗುತ್ತದೋ ಅಥವಾ ಇಲ್ಲವೋ ಎಂಬ ಬಗ್ಗೆ ಎಲ್ಲಾ ವಿಚಾರಗಳನ್ನು ಕೂಲಂಕುಷವಾಗಿ ವಿಚಾರ ಮಾಡಿಯೇ ಅವರು ಎನ್.ಓ.ಸಿ.ಯನ್ನು ಕೊಡತಕ್ಕಂಥದ್ದು. ಎನ್.ಓ.ಸಿ ಕೊಟ್ಟ ನಂತರ ಆ ರೀತಿಯ ದೂರುಗಳೇನಾದರೂ ಬಂದರೆ ಖಂಡಿತ ನಾವು ನಮ್ಮ ಮೈನಿಂಗ್ ಆಕ್ಟ್ ಪ್ರಕಾರ, ರೂಲ್ ಪ್ರಕಾರ ಏನಾದರೂ ವಯಲೇಶನ್ ಇದ್ದರೆ ಖಂಡಿತ ನಾವು ಅದರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ. ಯಾವುದಾದರೂ ಅಕ್ಕಪಕ್ಕದವರ ಜಮೀನಿನವರು ನಮಗೆ ತೊಂದರೆಯಾಗುತ್ತಿದೆ. ನಮ್ಮ ಜಮೀನಿಗೆ ಧಕ್ಕೆಯಾಗುತ್ತಿದೆ ಎಂದು ದೂರುಗಳು ಬಂದರೆ ಖಂಡಿತಾ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅಕ್ಕ

ಪಕ್ಕದ ಜಮೀನುದಾರರಿಗೆ ಮೊದಲೇ ಅವರಿಗೆ ಎನ್.ಒ.ಸಿ. ಕೊಡತಕ್ಕಂಥ ಸಂದರ್ಭದಲ್ಲಿಯೇ ಅಕ್ಕಪಕ್ಕದವರು ಅಬ್ಜೆಕ್ಷನ್ ಹಾಕುವುದಕ್ಕೆ ಕಾನೂನಿನ ಪ್ರಕಾರ ಅವಕಾಶವಿದೆ. ಸಾರ್ವಜನಿಕವಾಗಿ ಎನ್.ಓ.ಸಿ. ಕೊಡುವ ಒಂದು ತಿಂಗಳ ಮುಂಚೆಯೇ ಅಬ್ಜೆಕ್ಷನ್ ಹಾಕಲು ಅವಕಾಶ ಕೊಟ್ಟು 30 ದಿನಗಳ ಕಾಲಾವಕಾಶವನ್ನು ಕೊಟ್ಟಿರುತ್ತಾರೆ. ಅದನ್ನು ಅನೌನ್ಸ್ ಮಾಡಿದ ಮೂವತ್ತು ದಿನದ ನಂತರವೇ ಅವರಿಗೆ ಎನ್.ಓ.ಸಿ. ಕೊಡತಕ್ಕಂಥದ್ದು.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಪಕ್ಕದಲ್ಲಿರುವವರು ಅಬ್ಜೆಕ್ಷನ್ ಮಾಡಿದರೂ ಕೂಡ ಅವರು ಅಬ್ಜೆಕ್ಷನ್ ಅರ್ಜಿ ಹಾಕಿದ್ದರೂ ಕೂಡ ತಾವು ಲೈಸೆನ್ಸ್‌ನ್ನು ಮತ್ತೆ ಕೊಟ್ಟು ಇವೊತ್ತು ಬೆಂಗಳೂರು ಸುತ್ತಮುತ್ತ ಕ್ವಾರಿಗಳು ನಡೆಯುತ್ತಿವೆ. ಅದಕ್ಕೆ ಹತ್ತು ಉದಾಹರಣೆಗಳನ್ನು ನಾನೇ ಕೊಡಬಲ್ಲಿ. ಅದಕ್ಕೆ ಕಾರಣವೇನು?

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಕ್ಲಿಯರ್ ಆಗಿ ಹೇಳಿದ್ದೇನೆ. ಮಾನ್ಯ ಜಿಲ್ಲಾಧಿಕಾರಿಗಳು, ಸಂಬಂಧಪಟ್ಟವರು ಎನ್.ಓ.ಸಿ. ಕೊಡದೇ ನಾವು ಗಣಿಗಾರಿಕೆಗೆ ಲೈಸೆನ್ಸ್ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಆ ರೀತಿ ಕೊಟ್ಟರೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರುಗಳು ಬಂದರೆ ಖಂಡಿತ ಕ್ಯಾನ್ಸಲ್ ಮಾಡುತ್ತೇವೆ. ಈಗ ಬನ್ನೇರುಘಟ್ಟದ ಹತ್ತಿರ ದೂರುಗಳು ಬಂದಿತ್ತು. ಅಲ್ಲೆಲ್ಲಾ ನಮ್ಮ ಇಲಾಖೆಯವರು ಹೋಗಿ ನೋಡಿ ಅನೇಕ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದಾರೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಬನ್ನೇರುಘಟ್ಟದ ಬಗ್ಗೆಯೇ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಕ್ಕದಲ್ಲಿರುವವರೆಲ್ಲರೂ, ಸಾರ್ವಜನಿಕರು ಬಂದು ಅರ್ಜಿ ಕೊಟ್ಟರೂ, ಕಂಪ್ಲೆಂಟ್ ಮಾಡಿದ್ದರೂ ಕೂಡ ಇಲ್ಲಿಯತನಕ ಆ ಕ್ವಾರಿಯನ್ನು ಮುಚ್ಚಲಿಲ್ಲ. ಆ ಕ್ವಾರಿ ಹಾಗೆಯೇ ನಡೆಯುತ್ತಿದೆ. ಅದರ ಬಗ್ಗೆ ತಾವು ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವಿ. ಮುನಿಯಪ್ಪ : ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅಕ್ರಮವಾದ ಗಣಿಗಾರಿಕೆ ಕರಡಿಗುಡ್ಡದಲ್ಲಿ ಮತ್ತು ಚಾಮರಾಜನಗರದಲ್ಲಿ ನಡೆಯುತ್ತಿತ್ತು. ಹೈಕೋರ್ಟ್‌ನಿಂದ ಆಜ್ಞೆಯಾದ ಮೇಲೆ ಅದನ್ನು ಸಂಪೂರ್ಣವಾಗಿ ಬಂದ್ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಸಚಿವರು ಹೇಳಿದರು. ನಾನು ಈಗ ಇಲ್ಲಿ ಕೇಳುವಂಥದ್ದು ಏನೆಂದರೆ, ಅಕ್ರಮವಾಗಿ ಅಲ್ಲಿ ಗಣಿಗಾರಿಕೆಯನ್ನು ಯಾರು ಮಾಡುತ್ತಿದ್ದರೋ ಅವರ ಹೆಸರುಗಳನ್ನು ಸದನದಲ್ಲಿ ಹೇಳಿದ್ದರೆ ಒಳ್ಳೆಯದಿತ್ತು. ಇದಲ್ಲದೇ ಕೆಲವೊಂದು ಮೆಟೀರಿಯಲ್‌ಗಳನ್ನೂ ನೀವು ಸೀಜ್ ಮಾಡಿದ್ದೀರಿ. ಅವು ಯಾರದ್ದು, ಎಂಥದ್ದು ಎಂದು ಸ್ವಲ್ಪ ಡಿಸ್‌ಕ್ಲೋಸ್ ಮಾಡಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಎಚ್ಚರಿಕೆ ಕೊಟ್ಟಂತಾಗುತ್ತದೆ. ದಯವಿಟ್ಟು ಅಕ್ರಮವಾಗಿ ಗಣಿಗಾರಿಕೆ ಯಾರು ಮಾಡುತ್ತಿದ್ದರು ಎಂದು ಹೆಸರನ್ನು ಹೇಳಿ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾನು ಅದನ್ನು ತರಿಸಿ ಕೊಡುತ್ತೇನೆ. ಹೆಸರು ಮತ್ತು ಆ ವಿವರಗಳನ್ನೆಲ್ಲಾ ತರಿಸಿಕೊಡುತ್ತೇನೆ.

ಧಾರವಾಡ ಜಿಲ್ಲೆಯ ಪಶು ಸಂಗೋಪನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ಭರ್ತಿ

612 (5167) : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರ ಗೌಡ (ಕಲ್ಘಟಗಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?